ದಿಃ 27-06-2016 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲ ರವರಿಂದಃ

ನಿಡಿ 2 ರಲ್ಲಿ ನನ್ನ ಸಹಿಗಳು ಇವೆ. ಆ ಸಹಿಗಳನ್ನು ನಿಡಿ 2ಎ ಮತ್ತು ಬಿ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲ ರವರಿಂದಃ

ವಾದಿಯರು ಮತ್ತು 1 ನೇ ಪ್ರತಿವಾದಿ ರಾಯಪ್ಪ ಮತ್ತು ಮೃತ ಚೂನವ್ವ ಇವರ ಮಕ್ಕಳು ಎಂದರೆ ಗೊತ್ತಿಲ್ಲ. ನಾನು ಮೆಳವಂಕಿ ಗ್ರಾಮದವ. ರಾಯಪ್ಪನೂ ಮೆಳವಂಕಿಯುವ. ಅದು ಸಣ್ಣ ಊರು. ರಾಯಪ್ಪ ಮೊದಲಿನಿಂದಲೂ ಪರಿಚಯ. ರಾಯಪ್ಪ ಶೇತ್ಕಿ ಬಿಟ್ಟು ಬೇರೆ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ನಿಜ. 667/9 ಮತ್ತು 662/13 ಇವು ಮೆಳವಂಕಿಯ ಜಮೀನುಗಳು ಎಂದರೆ ನಿಜ. 667/9 ಮತ್ತು 662/13 ರಾಯಪ್ಪ ಮತ್ತು ಆತನ ಅಣ್ಣ ತಮ್ಮಂದಿರ ಹಿರಿಯರ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಈ ಜಮೀನುಗಳಲ್ಲಿ ರಾಯಪ್ಪನಿಗೆ 1/3 ಪಾಲು ಇದೆ ಎಂದರೆ ಗೊತ್ತಿಲ್ಲ. 1/3 ಭಾಗವನ್ನು ರಾಯಪ್ಪನು ರಾಮಪ್ಪ ಭೀಮಪ್ಪಾ ಕರೆವ್ವಗೋಳ ಇವರಿಗೆ ಖರೀದಿಗೆ ಕೊಟ್ಟನೆಂದರೆ ನನಗೆ ಗೊತ್ತಿಲ್ಲ. ಅದರಿಂದ ಬಂದ ಹಣದಿಂದ ರಾಯಪ್ಪ ದಾವಾ ಆಸ್ತಿಯನ್ನು ಖರೀದಿ ಮಾಡಿದನೆಂದರೆ ಗೊತ್ತಿಲ್ಲ. ರಾಯಪ್ಪ ಖರೀದಿಗೆ ತೆಗೆದುಕೊಂಡ ದಿ ನಾಂಕ ಗೊತ್ತಿಲ್ಲ. ರಾಯಪ್ಪ ಜಮೀನನ್ನು ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.ರಾಯಪ್ಪ ಜಮೀನು ಖರೀದಿ ಮಾಡಲು ಸಾಲ ಮಾಡಿದ ಬಗ್ಗೆ ಕರಾರು ಪತ್ರದಲ್ಲಿ ಬರೆಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಮೌಖಿಕವಾಗಿ ನನಗೆ ಹೇಳಿದ್ದಾರೆ. ಕರಾರು ಪತ್ರ ಮಾಡುವ 8 ದಿನಗಳ ಮುಂಚೆ ಮಾತುಕತೆ ಆಗಿತ್ತು, ಮಾತುಕತೆಗೆ ಬಂದಾಗ ಉತಾರನ್ನು ನೋಡಿಲ್ಲ. ರಾಯಪ್ಪನ ಹೆಸರು ಡೈರಿ ಪ್ರಕಾರ 6-12-1999 ರಂದು ಆಸ್ತಿಗೆ ನಮೂದಾಯಿತು. ಮಾತುಕತೆ ಆದ ದಿನ ಜಮೀನು ಬಗಟಿ ಎಂಬುವವರ ಹೆಸರಲ್ಲಿ ಇತ್ತು. ಬಗಟಿ ಎಂಬುವವರು ಕಲಾರಕೊಪ್ಪದವರು. ಪತ್ತಾರ ಸಾಹುಕಾರ ಕರಾರು ಪತ್ರಕ್ಕೆ ಸಹಿ ಮಾಡಿಲ್ಲ. ಕರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದವರು ಕಾಪಶಿ ಮನೆತನದವರು. ದುಂಡಪ್ಪ ಕಾಪಶಿ ಮತ್ತು ಕಲ್ಲಪ್ಪ ಕಾಪಶಿ ನನ್ನ ಅಣ್ಣ ತಮ್ಮಂದಿರು.

ನಿಂಗಪ್ಪ, ಕಲ್ಲಪ್ಪ ಮತ್ತು ನಾನು ಬೀಗರು. 2 ನೇ ಪ್ರತಿವಾದಿ ಮತ್ತು ನಾನು ಸಂಬಂಧಿಕರು. ಮಾತುಕತೆಗೆ ರಾಯಪ್ಪನ ಹೆಂಡತಿ ಮತ್ತು ಮಕ್ಕಳನ್ನು ಕರೆಸುವ ವಿಚಾರ ಮಾಡಲಿಲ್ಲ ಮತ್ತು ಕರೆಸಲಿಲ್ಲ. ಜಮೀನಿನ ಆಜು-ಬಾಜುದವರು ಕರಾರು ಪತ್ರಕ್ಕೆ ಸಹಿ ಮಾಡಿಲ್ಲ. ದಿಃ 8-11-1999 ರಂದು 75,000/- ಪಡೆದು ಕರಾರು ಪತ್ತ ಮಾಡಿಕೊಟ್ಟಿದ್ದು ಸುಳ್ಳು ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಸೇರಿ ರಾಯಪ್ಪ ಕುಡಿಯುತ್ತಿದ್ದ ಕಾರಣ ಆತನಿಂದ ಖೊಟ್ಟಿ ಕರಾರು ಪತ್ರ ಬರೆಸಿಕೊಂಡಿದ್ದೇವಂದರೆ ಸುಳ್ಳು. 75,000/- ಹಣವನ್ನು ರಾಯಪ್ಪನಿಗೆ ಕೊಟ್ಟಿಲ್ಲ ಎಂದರೆ ಸುಳ್ಳು. ಕರಾರು ಪತ್ರವನ್ನು ಹೊರತು ಪಡಿಸಿ ಬೇರೆ ಯಾವ ಕಾಗದಕ್ಕೂ ನಾನು ಸಹಿ ಮಾಡಿಲ್ಲ. ಅದೇ ಪತ್ರಕ್ಕೆ ನಾನು 2 ಸಲ ಬರಹಗಾರರ ಮುಂದೆ ನೊಂದಣಾಧಿಕಾರಿಗಳು ಮುಂದೆ ಸಹಿ ಮಾಡಿದ್ದೇನೆ. 2 ನೇ ಪ್ರತಿವಾದಿ ಖರೀದಿ ಪತ್ರದ ಪ್ರಕಾರ ಕಬ್ಜೆಯಲ್ಲಿದ್ದಾರೆಂದು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ. ರಾಯಪ್ಪನ ಹೆಂಡತಿ ಮಕ್ಕಳ ಪಾಲು ಮುಳುಗಿಸಲು ಖೊಟ್ಟಿ ಪತ್ರ ತಯಾರು ಮಾಡಿದ್ದೇನೆಂದರೆ ಸುಳ್ಳು.

ಕರಾರು ಪತ್ರದ ದಿನಾಂಕದಿಂದ 8 ಕ್ಕೆ ಮುನ್ನ ಪತ್ರಾ ಸಾಹುಕಾರ ಮನೆಯಲ್ಲಿ ಆದ ಮಾಕುಕತೆಯ ದಿನ ರಾಯಪ್ಪನಿಗೆ ಯಾವುದೇ ಮುಂಗಡ ಹಣವನ್ನು ಕೊಟ್ಟಿಲ್ಲ. ಆ ದಿನ ಬೇರೆ ಯಾವ ಕಚ್ಚಾ ಅಥವಾ ಬಾಂಡ್ ಪತ್ರವನ್ನು ಬರೆದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ